"ನೀನು ಯಾಕೆ ಸೋಮಯ್ಯನನ್ನು ಭೇಟಿಯಾಗಲು ಬಂದಿದ್ದೆ?" ಡಿಸೋಜ ಮುಂದುವರಿಸಿದ.

"ನನ್ನ ಹೆಂಡ್ತಿನ ಅತ್ಯಾಚಾರ ಮಾಡಿದವನನ್ನ ಬಚಾವು ಮಾಡ್ತಾ ಇದ್ದ ಸೋಮಯ್ಯ. ಅವ್ನನ್ನು ಹೇಗಾದ್ರೂ ಒಪ್ಪಿಸಿ, ಪ್ರಕರಣದಿಂದ ಹಿಂದೆ ಸರಿಯುವಂತೆ ಮಾಡುವ ಉದ್ದೇಶದಿಂದ ಬಂದೆ. ಅದಕ್ಕಾಗಿ ನಾನು ಹತ್ತು ಲಕ್ಷ ನಗದು ಕೊಡಲೂ ತಯಾರಿದ್ದೆ. ಆದ್ರೆ ಆ ಸೋಮಯ್ಯ ಒಪ್ಪಲೇ ಇಲ್ಲ... ಅವ್ನೊಬ್ಬ ದುರಂಹಕಾರಿ ವಕೀಲ. ಅವ್ನಿಗೆ ನ್ಯಾಯ ಬೇಡ... ಆ ಉಗ್ಗು ಇರುವ ವಕೀಲ ಕೋರ್ಟ್‌ನಲ್ಲಿ ಹೇಗೆ ವಾದಿಸಿ, ಗೆಲ್ತಾನೆ ಅನ್ನೋದೇ ಸೋಜಿಗ..." ಅವುಡುಗಚ್ಚಿದ ಪಾಲಯ್ಯ.

"ನೀನು ಎಷ್ಟು ಹೊತ್ತು ಅಲ್ಲಿದ್ದೆ?"

"ಸುಮಾರು ಇಪ್ಪತ್ತು ನಿಮಿಷ. ನಾನು ಬಂದ ಉದ್ದೇಶ ಹೇಳ್ದ ತಕ್ಷಣ ಆತ ಗೆಟ್ ಔಟ್ ಅಂದ!..."

"ಪಾಲಯ್ಯ... ನೀನು ಸುಳ್ಳು ಹೇಳ್ತಾ ಇದ್ದೀ... ನೀನು ಅತನೊಂದಿಗೆ ಮಾತಾಡಲೇ ಇಲ್ಲ. ತಕ್ಷಣ ರಿವಾಲ್ವರಿನಿಂದ ಆತನ ಕೊಲೆ ಮಾಡಿ, ಪಲಾಯನ ಮಾಡ್ದೆ..."

"ನಾನು ಮಾತಾಡಿದ್ದೆ ಸಾರ್, ನಾನು ಕೊಲೆ ಮಾಡಿಲ್ಲ..."

"ಸೋಮಯ್ಯನಿಗೆ ಉಗ್ಗು ಇಲ್ಲವೇ ಇಲ್ಲ! ನೀನು ಮಾತಾಡಿದ್ದು ಹಸಿ ಹಸಿ ಸುಳ್ಳು!!" ಗಹಗಹ ಹಾಕಿದ ಡಿಸೋಜ.

"ಸುಳ್ಳು... ಆತನಿಗೆ ಉಗ್ಗು ಇದೆ..."

"ನಿನ್ನನ್ನೀಗ ಬಂಧಿಸಬೇಕಾಗುತ್ತೆ..."

"ಡಿಸೋಜ, ಕೇವಲ ಅದೊಂದರ ಆಧಾರದ ಮೇಲೆ ಬಂಧಿಸೋದು ತಪ್ಪಾಗುತ್ತೆ. ಕೊಲೆಗೆ ಉಪಯೋಗಿಸಿದ ಆಯುಧ ಎಲ್ಲಿ?... ಪಾಲಯ್ಯ, ನೀವು ಖಚಿತವಾಗಿ ಹೇಳಬಲ್ಲಿರಾ... ಸೋಮಯ್ಯನಿಗೆ ಉಗ್ಗು ಇತ್ತು ಅಂತ."

"ನಾನೇಕೆ ಸುಳ್ಳು ಹೇಳಲಿ? ಆತ ಮಾತಾಡ್ಲು ತಡವರಿಸುತ್ತಾ ಇದ್ದ. ನನ್ಗೆ ಅಚ್ಚರಿಯಾಯಿತು. ಇವನೆಂತಹ ವಕೀಲ ಅಂತ..."

"ನೀವು ಭೇಟಿಯಾಗುವ ಹೊತ್ತಿಗೆ ಅಲ್ಲಿ ಬೇರೆ ಯಾರಾದರೂ ಇದ್ದರೆ?"

"ಯಾರೂ ಇರಲಿಲ್ಲ. ಕಕ್ಷಿಗಾರರು ಕಾಯುವ ಕೊಠಡಿ ಖಾಲಿಯಾಗಿತ್ತು. ಒಳಗಿನ ಕೋಣೆಯಲ್ಲಿ ಆತ ಕುಳಿತಿದ್ದ."

"ಆತ ತನ್ನ ಕ್ಯಾಬಿನ್ನಿನಲ್ಲಿ ಇರಲಿಲ್ಲವೇ?"

"ಊಹುಂ. ಹೊರಗಡೆ ಇದ್ದ. ಒಳಗೆ ಕ್ಲೀನಿಂಗ್ ಆಗ್ತಾ ಇದೆ ಅಂದ."

"ನೋಡಿ, ಎಲ್ಲಾ ಸುಳ್ಳು ಬೊಗಳ್ತಾ ಇದ್ದಾನೆ... ಕರಮಚಂದ, ಪಾಲಯ್ಯ ಕೊಲೆ ಮಾಡಿರೋದರಲ್ಲಿ ಸಂಶಯವೇ ಇಲ್ಲ."

"ಡಿಸೋಜ, ನೀವು ಆತುರಪಡಬೇಡಿ. ನೀವು ಈಗಲೇ ಕೂರ್ಗ್ ಹೈಟ್ಸ್ ಪಕ್ಕದಲ್ಲಿರೋ ಹಳೆಯ ಕಟ್ಟಡದ ಮೊದಲ ಮಹಡಿಯ ಹಿಂಭಾಗದಲ್ಲಿರೋ ಕೊಠಡಿಯಲ್ಲಿ ತಲಾಶು ನಡೆಸಿ. ಕೊಲೆಗೆ ಉಪಯೋಗಿಸಿದ ಆಯುಧ ಸಿಕ್ಕರೂ ಸಿಗಬಹುದು. ಆ ಕೋಣೆನ ಬಾಡಿಗೆಗೆ ತೆಗೆದುಕೊಂಡಿರೋದು ಯಾರೆಂದು ನೋಡಿ... ಅವನನ್ನು ವಿಚಾರಿಸಿ..."

ಡಿಸೋಜನೊಂದಿಗೆ ನನಗೂ ಬೆರಗು. ಕರಮಚಂದ ಹೇಳ್ತಿರೋದು ಏನು? ಯಾವ ಕೊಠಡಿ? ಅದಕ್ಕೂ, ಕೊಲೆಗೂ ಏನು ಸಂಬಂಧ?

"ಬಿದ್ದಪ್ಪ, ನಾವೀಗ ಮನೆಗೆ ಹೋಗೋಣ." ನಾವು ಅಲ್ಲಿಂದ ಹೊರಟೆವು.

★★★